# ತೋಟದ ನಟ್ಟನಡುವೆ ಧಗ ಧಗ ಉರಿದ ಚಂದ್ರ

ರಾಜನ ಗಮನ ತನ್ನತ್ತ ಸೆಳೆದ ಪರಮನು 'ಲೋ ಮಾಮ, ಇದೊಂದು ಇಸ್ತ್ರಿ ಮಾಡ್ಕೊಡು' ಅನ್ನುತ್ತ ತಂದ ಬಟ್ಟೆಯನ್ನ ಇಟ್ಟ. ರಾಜನು ಆ ಬಟ್ಟೆ ಎತ್ತಿಟ್ಟುಕೊಂಡು 'ಅಂಗೋಗಿ ಇಂಗ್ಬರೋಗು. ಉಜ್ಜಿಟ್ಟಿರ್ತಿನಿ, ಬಂದು ತಗಂಡೋಗು, ನೀನು ಬಂದವನು ಕತ್ ಮೇಲೆ ನಿಲ್ಬೇಡ' ಅಂದ.

'ಅಯ್ಯೋ ಬ್ಯಾಡ ಕಣಪ್ಪ. ಇಲ್ಲೇ ಇರ್ತೀನಿ. ಯಂಗೋ ಅಂಗೆ ಉಜ್ಕೊಡು ಸಾಕು, ನಿನ್ನ ಬೇರೆ ನಾನೆಲ್ಲಿ ಹುಡುಕೋದು, ಆಮೇಲೆ ಇದನ್ನೇ ಹಾಕ್ಕಂಡು ಎಲ್ಲಿಗಾರ ಹೋದೀಯ' ಅಂದನು.

ಆ ಮಾತಿಗೆ ಬೆಪ್ಪಾದ ರಾಜನು 'ಅದ್ಯಾವತ್ ನಿನ್ನ ಬಟ್ಟೆ ಹಾಕ್ಕಂಡು ಹೋಗಿದ್ದೀನಿ ಹೇಳು' ಅಂದ. 'ಲೋ ಮಾಮ ಮರ್ತೋದೇನೋ, ಸಣ್‌ಮಳ್ಳಯ್ಯನ ಮಗಳ ಮದುವೆಗೆ ಹೋಗ್ಬೇಕು ಇದು ಉಜ್ಕೊಡು ಅಂದ್ರೆ ಅವತ್ತೂ ಇದೇ ಡೈಲಾಗು ನಿಂದು. ಉಜ್ಜಿಟ್ಟಿರ್ತಿನಿ ಬರೋಗು ಅಂದೋನು ನಾನು ಬಂದು ನೋಡಿದ್ರೆ ಅಂಗಡಿನೇ ಬಾಗ್ಲು. ಅಯ್ಯೋ ಶಿವನೆ ಎಲ್ಲೋದ್ನಪ್ಪ... ಮದುವೆಗೆ ಗಾಡಿ ಬೇರೆ ಹೊರಟು ನಿಂತವೆ. ಸಿಕ್ಕಸಿಕ್ಕವರಲ್ಲಿ ವಿಚಾರಿಸುತ್ತಾ ಇಲ್ಲೇ ಎಲ್ಲೋ ಇರ್ತಾನೆ ಅಂದ್ಕಂಡು ನಾನು, ಊರ್ ಮೂರ್ ಸುತ್ ಬಂದೆ. ಎಲ್ಲಿ ಹುಡುಕಿದ್ರೂ ನೀನು ಸಿಗಲಿಲ್ಲ. ಲೋ ಮಾಮ, ಆಮೇಲೆ ನಾನು ಯಾವುದೋ ಕೈಗೆ ಸಿಕ್ಕಿದ ಒಂದು ಬಟ್ಟೆ ಹಾಕ್ಕಂಡು ಮದುವೆಗೆ ಹೋದೆ. ಆಶ್ಚರ್ಯವೇನೆಂದರೆ, ಅಲ್ಲಿ ನನ್ ತರದ್ದೇ ಬಟ್ಟೆ ಹಾಕ್ಕಂಡು ಓಡಾಡ್ತಿದ್ದವನ್ನ ಕಂಡೆ, ಅರೆ ನಾನ್ ತಂದ ಅಂಗಡಿನಲ್ಲೇ ಯಾವನೋ ತಂದವನಲ್ಲಾ ಎಂದು ಕುತೂಹಲಗೊಂಡೆ. ಮದುವೆ ಎಲ್ಲ ಮುಗೀತು, ಊಟಕ್ಕೆ ಕೂತ್ಕಂಡಾಗ ಈ ತಳವಾರನ್ ಮನೆ ನಿಂಗಿ ಅಲ್ಲೇ ಯಾಕೆ ಸುತ್ತುತ್ತಾವ್ಳೆ ಅನ್ನುವ ಸತ್ಯ ತಿಳಿಯಿತು. ಮಗ ನೀನು, ನಿನ್ನ ಮೈಮೇಲಿದ್ದ ಬಟ್ಟೆ ನಂದೆ' ಎಂದ ಪರಮನ ಆ ಮಾತಿಗೆ ಮುಗುಳ್ನಗತೊಡಗಿದ.

ಆ ಮಾತಿಗೆ ಪರಮನು 'ನೀನು ಮುಗ್ಧನೆಂದು ತೋರಿಸಿಕೊಳ್ಳಬೇಡ. ನಿನ್ನ ಎಷ್ಟು ಸಾರಿ ಕೇಳಿದ್ರೂ ಅವತ್ತೊಂದಿನ ಅವತ್ತೊಂದಿನ ಅಂತಿಯ. ಇವತ್ತೊಂದಿನ ಅಂತ ಅಂಗೇ ಆಕ್ಕಂಡೋದಿಯ. ಇಲ್ಲೇ ಇರ್ತಿನಿ ಕೆಲ್ಸ ಮಾಡ್ಕೊಡು. ಕತೆ ಕಟ್ಟುವ ಕಲಾವಂತ ನೀನು' ಅಂದು ಅಲ್ಲಾಡದೆ ಅಲ್ಲೇ ನಿಂತನು.

ಹೂವಿನ ತೋಟದ ರಾಜನಿಗೆ ಅಣ್ಣನ ಕೊಲೆಯಾದದ್ದು ತಟ್ಟನೆ ನೆನಪಾಯಿತೋ ಏನೋ, 'ಅಯ್ಯೋ ನನ್ನಪ್ಪ... ಹತ್ತು ಸಾವಿರ ಕೊಡ್ತಿನಿ ಅಂದ್ರೂ ಅಂಥಾ ಕೊಲೆಪಾತಕ ವಂಶಸ್ಥರ ಮನೆ ಮದುವೆಗೆ ನಾ ಬರಲ್ಲ. ಅಂತದ್ರಲ್ಲಿ ನಿನ್ ಬಟ್ಟೆ ಯಾರಿಗ್ ಬೇಕು. ಉಜ್ ಕೊಡ್ತಿನಿ ತಗಂಡೋಗು' ಎಂದ ರಾಜನ ಮಾತಿನಲ್ಲಿ ಬೂದಿ ಮುಚ್ಚಿದ ಕೆಂಡದಂತೆ, ಕಂಡೂ ಕಾಣದಂತೆ ಕಾವು ಒಳಗಿರುವುದು ಎದ್ದು ಕಾಣುತ್ತಿತ್ತು. ಆದರೂ ಸೇಡು ತೀರಿಸಿಕೊಳ್ಳುವಷ್ಟು ಕೆಟ್ಟವನಲ್ಲ ಎಂಬುದು ಊರಿಗೇ ಗೊತ್ತಿತ್ತು.

ಮನೆಯೊಳಗೆ ಅದೇನೋ ಕೆಲಸದಲ್ಲಿ ತೊಡಗಿದ್ದವಳು ಯಾರೋ ಬಂದಂತಾಗಿ ದನಿಯಿಂದ ಪರಮೇಶನೆ ಎಂದು ತಿಳಿದು ಆಚೆ ಬಂದು 'ಲೋ ಪರ್ಮ, ಮದುವ್ಗೆ ನೀನೋಗಲ್ವ' ಎಂದು ನಂಜಮ್ಮಜ್ಜಿ ಕೇಳಿದಳು. ಅವಳ ಮಾತಿಗೆ 'ಹೋಗ್ತಿನಿ ಕಣವ್ವ' ಅಂದವನು ಇತ್ತ ತಿರುಗಿ ಇನ್ನೂ ಅವನ ಬಟ್ಟೆಯನ್ನು ಕೈಗೆತ್ತಿಕೊಳ್ಳದ್ದನ್ನು ಗಮನಿಸಿ, 'ನಂದ ತಗಳೋ, ಬೇಗ ಉಜ್ಜಿಕೊಡು' ಎಂದು ಮಾತನಾಡುತ್ತಾ ಅಲ್ಲೇ ನಿಂತ.

ಚೊಟ್‌ನಿಂಗನು ಹೊಂಬಾಳೆ, ಬಾಳೆ ಹೊತ್ತುಕೊಂಡು ಹೋಗುತ್ತಿದ್ದವನು, ಆ ಹೊರೆಯಿಂದ ಸುಧಾರಿಸಿಕೊಳ್ಳಲು ರಾಜನ ಅಂಗಡಿ ಎದುರು ನಿಂತು ಹೆಗಲು ಬದಲಿಸಿದ. ನಂಜಮ್ಮಜ್ಜಿ ಈ ಚೊಟ್ಟನಿಂಗನನ್ನು ಕೂಗಿ 'ಎಷ್ಟೊತ್ತಿಗೆ ಹೋಗದು, ಇನ್ನೂ ಹೊರಟಂಗೇ ಕಾಣಲ್ಲಾ, ಹೆಣ್ಣಿನ ಮನೆಯವ್ರು ಊಟಕ್ಕೆ ತಲೆ ಲೆಕ್ಕಹಾಕ್ಬಾರ್ದಾ?' ಎಂದಳು. 'ಈಗೊರಟ್ರು ಕಣಜ್ಜಿ' ಅಂದೋನು, 'ಗಾಡಿ ಓಡಿಸೋ ಆ ನಾಯಕರ ಹುಡುಗ್ರು, ಆ ಕೊರಮರ ಹುಡುಗ್ರು ಹಂದಿ ಬೇಟೆಗೆ ಹೋಗಿದ್ದವ್ರು... ಈಗ ಬಂದು ರೆಡಿಯಾದ್ವು' ಎನ್ನುತ್ತಾ ಆ ಭಾರದ ಹೊರೆ ಹೊತ್ತು ಮುಂದೆ ಹೋದನು. ಆ ಮಾತಿಗೆ 'ಅಯ್ಯೋ ಅವರ್ ಕುಕ್ಕುರ್ಸ... ಇವತ್ತೂ ಹೋಗ್ಬೇಕಾಗಿತ್ತಾ, ಅದೇನ್ ಬರ್ಗೆಟ್ಟವೋ ನಾ ಕಾಣೆ' ಅಂದು ಗೊಣಗಿದೋಳು, 'ಮಳೆಗಾಲ ಬೇರೆ, ಕಣ್ಣಾಗೆ ಬೆಳಕಿದ್ದಂಗೆ ಊರು ಸೇರಿ' ಅಂದ ನಂಜಮ್ಮಜ್ಜಿ ಕುರಿಗೂಡು ನೆರಿಕೆ ಸರಿ ಮಾಡುತ್ತಾ ಆಕಾಶ ನೋಡುತ್ತಿದ್ದಳು. ಪರಮೇಶನು ಇಸ್ತ್ರಿ ಮಾಡಿದ ಬಟ್ಟೆ ಹಿಡಿದು ಅತ್ತ ಅವಸರವಸರವಾಗಿ ಹೆಜ್ಜೆ ಹಾಕಿದ.

ಇತ್ತ ಹಸಿರುಗಾಯಿ ತರಲು ಶಿವಣ್ಣನ ಅಂಗಡಿಗೆ ಹೋಗುತ್ತಿದ್ದ ತ್ಯಾಗನು ಮದುವೆಗೆ ಹೊರಟು ಅವಸರದಲ್ಲಿ ರೆಡಿಯಾಗುತ್ತಿದ್ದ, ಅತ್ತಿಂದಿತ್ತಿಂದ ಓಡಾಡುತ್ತಿದ್ದ ಊರ ಹುಡುಗರನ್ನು ಕಂಡನು. ಆ ಗುಂಪಿನಲ್ಲಿ ಕೆಂಚಜ್ಜನ ಮಗ ಚಿಕ್ಕನನ್ನು, ದೊಡ್ಡಪ್ಪನ ಮಗ ಲೋಕನನ್ನು ನೋಡಿ ಅಲ್ಲೇ ನಿಂತು, ಆ ಕಡೆಯಿಂದ ಬರುತ್ತಿದ್ದ ಕುಂಬಾರರ ಸಂಜೀವಮ್ಮನ ಗಂಡನ ಜೊತೆಗೆ ಮಾತಿಗೆ ನಿಂತನು. ಎಷ್ಟೊತ್ತಾದರೂ ಮನೆಗೆ ಬಾರದ ತ್ಯಾಗನನ್ನು ನೋಡಲು ಅವನವ್ವ ದ್ಯಾವಕ್ಕ ಮನೆಯಿಂದ ಹೊರಗೆ ಬಂದಳು.

ಅಷ್ಟು ದೂರದಲ್ಲಿ ಕಾಣಿಸಿಕೊಂಡ ತ್ಯಾಗನನ್ನು ಒಂದು ಕೂಗು ಹಾಕಿ ಕರೆದಳು. ತ್ಯಾಗನ ಹೆಜ್ಜೆಗಳು ಬಿರುಸಾದವು. ಬೀದಿಯಿಂದ ಮನೆಗೆ ಹೋದ ದ್ಯಾವಕ್ಕ ಮನೆ ಮುಂದೆ ಕೆದಕಾಡುತ್ತಿದ್ದ ಕೋಳಿಗಳ ಕಂಡು 'ಥೂ, ಈ ಹಾಳಾದ್ ಕೋಳಿಗಳು ಒಂದು ಸೊಪ್ಪಿನ ಬೀಜಾನೂ ಬಿಡಲ್ಲ. ಎಲ್ಲ ಕೆದಕಿ ಕೆದಕಿ ತಿಂದಾಕ್ತವೆ' ಎಂದು ಕೋಳಿಗಳು ಕೆದಕಿ ಕೆದಕಿ ಮನೆ ಬಾಗಿಲಿಗೆ ಸಿಡಿದ ಮಣ್ಣನ್ನು ಗುಡಿಸಲು ಪರಕೆ ಎತ್ತಿಕೊಂಡಳು. ಇದೇ ಸಮಯಕ್ಕೆ ಓಡಿ ಬಂದ ತ್ಯಾಗನು ನನ್ನನ್ನು ಹೊಡೆಯಲು ಅವ್ವ ಬರಲು ತೆಗೆದುಕೊಳ್ಳುತ್ತಿದೆ ಎಂದು ತಿಳಿದು ಅತ್ತ ನಾಲ್ಕೆಜ್ಜೆ ಹಾರಿದ. ಅದನ್ನು ಕಂಡ ತ್ಯಾಗನ ಅವ್ವ, 'ನೀನು ಏನಾರ ತಗಂಡ್ ಬಾ ಅಂದ್ರೆ ಹೋದವನು ಅಲ್ಲೇ ಉಳ್ಕತೀಯ' ಎನ್ನುತ್ತ, ಪರಕೆ ಅಂಗೈಗೆ ಕುಕ್ಕಿ

